ಶ್ರೀ ರಾಮಕೃಷ್ಣ ಹೆಗಡೆ.—ಕವಿ ರನ್ನನ ನೆನಪಿಗಾಗಿ ಸ್ಮಾರಕವನ್ನು ಭವನ ನಿರ್ಮಿಸುವ ಬಗ್ಗೆ ಯೋಚಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ ನಾನು ಇಲ್ಲವೆಂದು ಹೇಳಿದ್ದೇನೆ. ಸ್ಥಾನಿಕ ಜನರು ಸ್ಮಾರಕವನ್ನು ಕಟ್ಟಬೇಕೆಂದು ಇಚ್ಛಿಸಿ ಸಾರ್ವಜನಿಕರು ಹಣವನ್ನು ಕೊಟ್ಟು ಸಹಕರಿಸುವುದಾದರೆ ರನ್ನನ ಸ್ಮಾರಕವನ್ನು ಮಾಡುವುದಕ್ಕೆ ಯೋಜನೆಯನ್ನು ತಯಾರು ಮಾಡೋಣ. ರನ್ನನು ಒಳ್ಳೆಯ ಕವಿ. ಕರ್ನಾಟಕ ಸಾಹಿತ್ಯ ಇತಿಹಾಸದಲ್ಲಿ ಅವನಿಗೆ ವಿಶೇಷವಾದಂಥ ಸ್ಥಾನ ಇದೆ. ಸೂಕ್ತವಾದಂಥ ರೀತಿಯಲ್ಲಿ ಸ್ಥಾನಿಕ ಜನರ ಸಲಹೆಯನ್ನು ಕೇಳಿ ಸ್ಮಾರಕದ ಯೋಜನೆಯನ್ನು ನಾವು ಸಿದ್ಧ ಮಾಡುತ್ತೇವೆ.

ಕಲಘಟಗಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆಯುವುದು.

೫೦೪. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿಯಲ್ಲಿ ೩೦ ಹಾಸಿಗೆಯುಳ್ಳ ಒಂದು ಆಸ್ಪತ್ರೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರಲ್ಲಿ ಇದೆಯೇ ?

ಆ) ಕಲಘಟಗಿ ಕ್ಷೇತ್ರದ

೧) ಸುರಶೆಟ್ಟಿಕೊಪ್ಪ (ಕಲಘಟಗಿ ತಾಲ್ಲೂಕು)

೨) ಮುತ್ತಗಿ (ಕಲಘಟಗಿ ತಾಲ್ಲೂಕು)

೩) ಕುರಡೀಕೇರಿ (ಹುಬ್ಬಳ್ಳಿ ತಾಲ್ಲೂಕು)

೪) ಮಂಟಾರಣ (ಹುಬ್ಬಳ್ಳಿ ತಾಲ್ಲೂಕು)

ಈ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು).—

ಅ) ಇದೆ.

ಆ) ಇದನ್ನು ಪರಿಶೀಲಿಸಲಾಗುವುದು.

ಶ್ರೀ ಪಿ. ಸಿ. ಸಿದ್ದನಗೌಡ.—ಘನಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ 'ಇದೆ' ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಯಾವಾಗ ಮಾಡುತ್ತಾರೆಂದು ಸಚಿವರು ಹೇಳಬೇಕು. ಇನ್ನು ಎರಡನೆಯ ಪ್ರಶ್ನೆಗೆ, ನಾನು ಹೇಳುವುದಾದರೆ, ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ರೆಕಮೆಂಡೇಷನ್ ಮಾಡಿ ಕಳುಹಿಸಿದ್ದಾರೆ. ಆದ್ದರಿಂದ ಅದನ್ನೂ ಯಾವಾಗ ಮಾಡುತ್ತಾರೆಂದು ಸಚಿವರು ಹೇಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಜನರೇಟರ್ ಕೊಂಡುಕೊಳ್ಳುವ ವಿಚಾರದಲ್ಲಿ ಟೆಂಡರ್‌ನ್ನು ಕರೆದಿದೆ. ಈ ಕ್ರಮಗಳೆಲ್ಲಾ ಮುಂಗಡ ಪತ್ರದ ಮೇಲೆ.....

ಶ್ರೀ ಪಿ. ಸಿ. ಸಿದ್ದನಗೌಡ.—ನಾನು ಕೇಳಿರುವುದು ಜನರೇಟರ್ ಬಗ್ಗೆ ಅಲ್ಲ. ಕಲಘಟಗಿ ತಾಲ್ಲೂಕಿನಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆ ವಿಷಯವಾಗಿ ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಸಿಗೆಗಳಿಗೂ ಜನರೇಟರುಗಳಿಗೂ ಏನೂ ವ್ಯತ್ಯಾಸ ಇಲ್ಲವೇ ?

ಅಧ್ಯಕ್ಷರು.—ನೀವು ಮಂತ್ರಿಗಳಾಗಿದ್ದಾಗ ಈ ತರಹ ಆಗಿರಲಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನಗೆ ಇಷ್ಟೊಂದು ಕನ್‌ಫ್ಯೂಷನ್ ಆಗಿರಲಿಲ್ಲ. ಒಬ್ಬರಿಗೇ ಹೆಲ್ತ್ ಮತ್ತು ಎಕ್ಸೈಸ್ ಖಾತೆ ಕೊಟ್ಟರೆ ಹೀಗೆ ಆಗುವುದು.